ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ 2026

**ಗಿವ್ ಟು ಗೇನ್**

# ತಿಟ್ಟತ್ತಿ ತಿರುಗಿ ನೋಡಿದಾಗ...



**ಕೌಟುಂಬಿಕ ಬದುಕಿನಲ್ಲಿ ಕಳೆದುಹೋದ ತಮ್ಮತನವನ್ನು ಹುಡುಕಿಕೊಳ್ಳಲು ವಯಸ್ಸಿನ ಎಲ್ಲೆ ಇರಬಾರದು. ತಮ್ಮ 50ನೇ ವಸಂತದ ನಂತರ ಬೈಕಿಂಗ್ ಆರಂಭಿಸಿರುವ ವಿಲ್ಮಾ ಮತ್ತು ಕಂಡ ಕನಸನ್ನು ನನಸಾಗಿಸಿಕೊಂಡಿರುವ ಯುವ ಮೇಜರ್ ಸ್ವಾತಿ ಅವರ ಹೆಜ್ಜೆಗುರುತುಗಳು ಇಲ್ಲಿವೆ. ಯಶೋ ಮಾರ್ಗದಲ್ಲಿರುವ ಇವರಿಬ್ಬರೂ ತಿಟ್ಟತ್ತಿ ತಿರುಗಿದಾಗ ಕಂಡಿರುವ ಅನುಭವಗಳನ್ನು ಇಲ್ಲಿ ನಿರೂಪಿಸಲಾಗಿದೆ.**

**■ ರೂಪಾ ಕೆ.ಎಂ.**

ಒಬ್ಬೊಬ್ಬರ ಬದುಕು ಒಂದೊಂದು ಬಗೆಯದ್ದು. ಈ ಬದುಕಿನಲ್ಲಿ ಯಾವ ಕ್ಷಣದಲ್ಲಿ ಬೇಕಾದರೂ ತಿರುವು ಸಿಕ್ಕಿ, ಅಂದುಕೊಳ್ಳದೇ ಇದ್ದದ್ದು ಆಗಿಬಿಡಬಹುದು ಅಥವಾ ಎಂದೋ ಒಡಮೂಡಿದ ಕನಸು ನನಸಾಗಬಹುದು. ಹೀಗೆಲ್ಲ ಆಗಿಬಿಡುವ ಚುಂಬಕ ಶಕ್ತಿಯೊಂದು ಎಲ್ಲರ ಬದುಕಿನೊಳಗೂ ಹಾಸುಹೊಕ್ಕಿದೆ. ಸದಾ ತಿರುವಿನ ಧ್ಯಾನ ಮಾಡುತ್ತಿರುವಾಗಲೇ, ಅದು ಸಿಗದೇ ಆಟ ಆಡಿಸಬಹುದು ಅಥವಾ ಸಿಕ್ಕಿದ್ದು ತಿರುವೋ, ಬಳಸು ದಾರಿಯೋ ಏನೊಂದೂ ಅರ್ಥವಾಗದೇ, ಅದು ತೆರೆದುಕೊಂಡಲೆಲ್ಲ ಸಾಗಿ 'ತಿಟ್ಟತ್ತಿ ತಿರುಗಿ' ನೋಡಿದಾಗ ಓಹ್ ಇದೊಂದು ತಿರುವೇ ಆಗಿತ್ತಲ್ಲ ಎಂಬ ಸೋಜಿಗವನ್ನೂ ತರಬಹುದು.

ಸಾಧನೆಯೆಂಬುದು ಸದಾ ಕನಸು, ಹಂಬಲಗಳಷ್ಟೇ ಆಗಿರದೆ, ಶಿಸ್ತು, ಸಂಯಮ, ಸತತ ಪ್ರಯತ್ನಗಳ ಪ್ರತಿಫಲವೇ ಆಗಿರುತ್ತದೆ. ಯಾವುದೋ ಗಳಿಗೆಯಲ್ಲಿ ತೆಗೆದುಕೊಂಡ ಬಲವಾದ ನಿರ್ಧಾರ ಹಾಗೂ ಆ ನಿರ್ಧಾರವನ್ನು ಸಾಫಲ್ಯಗೊಳಿಸಲು ತೊಡುವ ಸಂಕಲ್ಪಗಳು ಸಾಧಿಸುವ ಇಚ್ಛಾಶಕ್ತಿಗೆ ತೋಳ್ಬಲ ತುಂಬಬಲ್ಲವು. ಹೀಗೆ ವಿಶಿಷ್ಟ ಕ್ಷೇತ್ರಗಳಲ್ಲಿ ಛಾಪು ಮೂಡಿಸಿರುವ ಇಬ್ಬರು ಕನ್ನಡತಿಯರು ತಮ್ಮ ಬದುಕಿನ 'ತಿರುವಿನ' ಬಗ್ಗೆ ಮಾತಾಡಿದ್ದಾರೆ. ಅವರ ಮಾತಿನ ಒಟ್ಟಂದದ ಸಾರ ಇಲ್ಲಿದೆ.